ಹಾಕಿಕೊಂಡಿದ್ದಾರೆಯೇ ಹೇಗೆ? ಈ ವಿಷಯದ ಬಗ್ಗೆ ತಮ್ಮ ಇಲಾಖೆಗೆ ಅವರು ಮನವಿಗಳನ್ನೂ ಕೂಡ ಕಳುಹಿಸಿಕೊಟ್ಟಿದ್ದಾರೆ. ಈ ಬಾರಿ ಸೆರೆಕ್ಕಾಗಿರತಕ್ಕಂಥ ೬-೭ ಜನ ಹೆಣ್ಣು ಮಕ್ಕಳು ಗ್ರಾಮಾಂತರ ಪ್ರದೇಶದಿಂದ ಬಂದಿರುವವರಾಗಿದ್ದಾರೆ. ಆದರಲ್ಲೂ ನಮ್ಮ ಭಾಗದಿಂದ ಬಂದಿರತಕ್ಕಂಥ ಹೆಣ್ಣು ಮಕ್ಕಳಿದ್ದಾರೆ. ಅವರಿಗೆ ಸಹಾಯಧನ ಕೊಡದಿದ್ದರೆ ಅವರು ಹೋಗಿಬರುವ ಖರ್ಚನ್ನು ಭರಿಸಲಿಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಅಂಶವನ್ನು ಅವರು ತಮ್ಮ ಮನವಿಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಆದ್ದರಿಂದ ಸರ್ಕಾರದವರು ಅವರಿಗೆ ಧನ ಸಹಾಯ ಮಾಡಬೇಕು. ತಾವು ಯುವಜನ ಮಂತ್ರಿಗಳಾಗಿದ್ದೀರಿ. ಆದ್ದರಿಂದ ಇವರಿಗೂ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ,

ಶ್ರೀ ಎಸ್. ರಮೇಶ್.—ಇದರ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಮನವಿಗಳು ಬಂದಿವೆ. ನಾವು ಕೆಲವು ಮಾಹಿತಿಗಳನ್ನು ಆ ಸಂಸ್ಥೆಗೆ ಕೇಳಿದ್ದೇವೆ. ಅಲ್ಲಿಂದ ಮಾಹಿತಿಗಳು ಬಂದ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಬಸವರಾಜ್.—ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಿಂದ ಕ್ರೀಡಾಪಟುಗಳು ಹೊರ ದೇಶಗಳಿಗೆ ಹೋಗುತ್ತಿರುತ್ತಾರೆ. ಈ ರೀತಿ ಕರ್ನಾಟಕದಿಂದ ಹೋಗುವ ಟೀಮ್‌ಗಳು ಇಲ್ಲವೇ ಕ್ರೀಡಾಪಟುಗಳು ಕರ್ನಾಟಕ ರಾಜ್ಯಕ್ಕೆ ಹೆಸರು ತರುವ ಕ್ರೀಡಾಪಟುಗಳಾಗಿರುತ್ತಾರೆ. ಆದ್ದರಿಂದ ಅವರಿಗೆ ಹೋಗಿಬರುವ ವೆಚ್ಚವನ್ನು ಸರ್ಕಾರ ಕೊಡುತ್ತದೆಯೇ? ಕೊಡದಿದ್ದರೆ ಇನ್ನು ಮುಂದಾದರೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ರಮೇಶ್.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಕೇಂದ್ರ ರಕ್ಷಣೆ ಸ್ ಮಾಡಿರತಕ್ಕಂಥ ಟೀಮ್‌ಗಳು ಏನಿವೆ ಅವುಗಳಿಗೆ ರಾಜ್ಯ ಸರ್ಕಾರದಿಂದಾಗಲಿ ಅಥವಾ ನಮ್ಮ ಕ್ರೀಡಾ ಸಂಸ್ಥೆಗಳಿಂದಾಗಲಿ ಅವು ಕೇಳಿದಾಗ ಧನ ಸಹಾಯ ಮಾಡತ್ತೇವೆ. ಆದರೆ ಇನ್‌ವಿಟೇಷನ್ ಟೀಮ್‌ಗಳಿಗೆ ಧನ ಸಹಾಯ ಮಾಡಲಿಕ್ಕೆ ಬರುವುದಿಲ್ಲ.

ಚೆಂಕ್ಕೆ ಪ್ರಶ್ನೆ ೯೩ (ಉತ್ತರಿಸಲಾಗಿದೆ)

ಅಧ್ಯಕ್ಷರು.—ಈ ಪ್ರಶ್ನೆ ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟಿರುವುದರಿಂದ ಇದನ್ನು ಆ ಇಲಾಖೆಗೆ ಟ್ರಾನ್ಸ್‌ಫರ್ ಮಾಡಿರುತ್ತೇನೆ.

ನೆಲಮಂಗಲ ಕೋರ್ಟ್ ಕಟ್ಟಡದ ಬಗ್ಗೆ

೩೧೬. ಶ್ರೀ ಅಂಜನಮೂರ್ತಿ (ನೆಲಮಂಗಲ).—ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಟೌನಿನಲ್ಲಿ ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಒಂದು ಸಣ್ಣ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಪ್ರತ್ಯೇಕ ನ್ಯಾಯಾಲಯದ ಕಟ್ಟಡ ಬೇಕೆಂಬ ಮನವಿ ಸರ್ಕಾರಕ್ಕೆ ಬಂದಿರುವುದು ನಿಜವೆ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ಹೌದು.

ಇ) ಕರ್ನಾಟಕ ಉಚ್ಚ ನ್ಯಾಯಾಲಯದ ಸಮಾಲೋಚನೆಯೊಂದಿಗೆ ಸರ್ಕಾರದ ಪರಿಶೀಲನೆಯಲ್ಲಿದೆ

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ನೆಲಮಂಗಲದಲ್ಲಿ ಮುನ್ಸೀಫ್ ಮತ್ತು ಮ್ಯಾಜೀಸ್ಟ್ರೇಟ್ ನ್ಯಾಯಾಲಯಕ್ಕೆ ಪ್ರತ್ಯೇಕ ಕಟ್ಟಡ ಕಟ್ಟಬೇಕೆಂಬ ಬಗ್ಗೆ ಕೇಳಿದ್ದಾರೆ. ಈ ಬಗ್ಗೆ ಲ್ಯಾಂಡ್ ಆಕ್ವೈಲ್ ಮಾಡಿದ್ದೇವೆ. ಈ ಕಟ್ಟಡದ ಕಾಸ್ಟ್ ೩ ಲ ೬೦ ಸಾವಿರ ರೂಪಾಯಿಗಳಾಗುತ್ತದೆ. ಈ ದುಡ್ಡು

ಯಾರಿಂದ ಬಂದರೂ ಸ್ವೀಕಾರ ಮಾಡುತ್ತೇವೆ. ಸಧ್ಯಕ್ಕೆ ಸರ್ಕಾರದಲ್ಲಿ ಹಣವಿಲ್ಲದಿರುವುದರಿಂದ ಈ ಕೆಲಸ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಶ್ರೀ ಅಂಜನಮೂರ್ತಿ.—ಮಾನ್ಯ ಅಧ್ಯಕ್ಷರೇ, ನಿನ್ನೆಗೂ ಇವತ್ತಿಯಲ್ಲಿ ಈ ಕೋರ್ಟ್ ಸ್ಥಾಪನೆಯಾಯಿತು. ಇದು ೨೫ ಅಡಿ ಉದ್ದ ೧೫ ಅಡಿ ಅಗಲದ ಕೊಠಡಿಯಾಗಿರುತ್ತದೆ. ನಾವು ೧೦ ಜನ ಲಾಯರುಗಳಿದ್ದೇವೆ. ಅಲ್ಲಿ ಆರು ಆಸನಗಳು ಇರುತ್ತವೆ. ಒಬ್ಬರು ಒಳಗಡೆ ಹೋದರೆ ಇನ್ನೊಬ್ಬರು ಹೊರಗಡೆ ಬರಬೇಕಾದ ಸ್ಥಿತಿಯಲ್ಲಿದೆ. ಆದ್ದರಿಂದ ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಂಡು ಈ ಕಟ್ಟಡದ ಕೆಲಸವನ್ನು ಮಾಡಿಕೊಡುತ್ತೀರಾ ?

ಶ್ರೀ ಬಿ. ಶಿವಣ್ಣ.—ಹಣದ ಅಭಾವ ಇದೆ ಎಂದು ಹೇಳಿದ್ದೇನೆ. ಈ ಬಗ್ಗೆ ಹೈಕೋರ್ಟಿಗೆ ಲೆಟರ್ ಬರೆದಿದ್ದೇವೆ, ಪಂತ್ತು ರಿಮೈಂಡರ್ ಕೂಡ ಮಾಡಿತ್ತಿದ್ದೇವೆ. ಹಣದ ಅಭಾವ ಇರುವುದರಿಂದ ಈ ಕೆಲಸ ಸಧ್ಯಕ್ಕೆ ಆಗುವುದಿಲ್ಲ.

ಶ್ರೀ ಅಂಜನಮೂರ್ತಿ.—ಯಾವಾಗ ಆಗುತ್ತದೆ ? ಪ್ರತ್ಯೇಕ ಕೋರ್ಟ್ ಬಿಲ್ಡಿಂಗ್ ಬೇಕೆಂದು ನಾವು ಕಳೆದ ೮ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಶಿವಣ್ಣ.—ಈಗ ದುಡ್ಡಿಲ್ಲ, ದುಡ್ಡು ಬಂದಮೇಲೆ ನೋಡುತ್ತೇವೆ.

ಶ್ರೀ ಎಸ್. ಜಿ. ನಾಯಕ್.—ಯಾವಾಗ ದುಡ್ಡು ಬರುತ್ತದೆ ? ನಮಗೆ ಸರಿಯಾದ ಉತ್ತರ ಕೊಡಬೇಕು.

ಶ್ರೀ ಬಿ. ಶಿವಣ್ಣ.—ಪರಿಶೀಲನೆ ಮಾಡಿ ಹೇಳುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಐದನೆಯ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಚಿನ್ನಪ್ಪರೆಡ್ಡಿ ವರದಿಯ ಬಗ್ಗೆ

೨೫೫. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿಗೊಳಿಸುವಲ್ಲಿ ತಡವಾಗಲು ಕಾರಣಗಳೇನು?

ಆ) ವರದಿಯನ್ನು ಯಾವಾಗ ಜಾರಿಗೊಳಿಸಲಾಗುವುದು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ಮತ್ತು ಆ) ಚಿನ್ನಪ್ಪ ರೆಡ್ಡಿ ಆಯೋಗದ ವರದಿಯು ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಯಲ್ಲಿದ್ದು ಆದರ ವರದಿಯು ಬಂದನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಮಂಡಲ್ ಆಯೋಗದ ವರದಿಯ ಬಗ್ಗೆ ರಾಜ್ಯ ಸರ್ಕಾರದ ನಿಲುವಿನ ಬಗ್ಗೆ

೨೫೬. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡಲ್ ಆಯೋಗದ ವರದಿಯ ಬಗ್ಗೆ ರಾಜ್ಯ ಸರ್ಕಾರದ ನಿಲುವು.

ಆ) ಈ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಂದೆ ರಾಜ್ಯ ಸರ್ಕಾರವು ತನ್ನ ನಿಲುವನ್ನು ಸ್ಪಷ್ಟಪಡಿಸುವುದೇ ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ಮತ್ತು ಆ) ಮಂಡಲ್ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದ್ದು, ಈ ಪ್ರಕರಣವು ಭಾರತದ ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿದೆ. ಈ ಹಂತದಲ್ಲಿ ರಾಜ್ಯ ಸರ್ಕಾರದ ನಿಲುವಿನ ಬಗ್ಗೆ ಇನ್ನೂ ಅಂತಿಮ ತೀರ್ಮಾನವನ್ನು ಕೈಗೊಂಡಿರುವುದಿಲ್ಲ.